**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಚನ್ನರಾಯಪಟ್ಟಣ**

**ಸಿಸಿ ಸಂಖ್ಯೆ 272/2015** **CW**-9 **PW**-8

**ಸಾಕ್ಷಿಯನ್ನು ದಿಃ 09.01.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಹೆಸರುಃ | ನವೀನ ಎಂ ಆರ್ |
| ತಂದೆಯ ಹೆಸರುಃ | ರಾಮನಾಯಕ |
| ವಯಸ್ಸುಃ | 38 ವರ್ಷ |
| ವೃತ್ತಿಃ | ಹೆಚ್ ಸಿ 156 ಹಳ್ಳಿ ಮೈಸೂರು ಪೋಲೀಸ್ ಠಾಣೆ |
| ವಾಸ ಸ್ಥಳಃ | ಹೊಳೆನರಸೀಪುರ |

**ಮುಖ್ಯವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಜೂನ್ 2014 ರಿಂದ ಅಕ್ಟೋಬರ್ 2017 ರವರೆಗೆ ನಾನು ಚನ್ನರಾಯಪಟ್ಟಣ ನಗರ ಠಾಣೆಯುಲ್ಲಿ ಪಿ ಸಿ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 23.11.2014 ರಂದು ಚಾಸಾ-10 ರಿಂದ ಚಾಸಾ-12 ರವರ ಜೊತೆ ರಾತ್ರಿ ಗಸ್ತಿನಲ್ಲಿದ್ದಾಗ ಸಮಯ ಸುಮಾರು 1.30 ರ ಸಮಯದಲ್ಲಿ ನಾಗಸಮುದ್ರ ರಸ್ತೆ ಗಣಪತಿ ದೇವಾಲಯದ ಬಳಿ ನಾಗಸಮುದ್ರ ಕಡೆಯಿಂದ 2 ದ್ವಿಚಕ್ರ ವಾಹಗಳು ಬರುತ್ತಿದ್ದು ನಾವು ತಪಾಸಣೆ ಮಾಡುವ ಉದ್ದೇಶದಿಂದ ಸದರಿ ವಾಹನಗಳನ್ನು ತಡೆದಾಗ ಸದರಿ ವಾಹನಗಳ ಚಾಲಕರು ಗಾಬರಿಗೊಂಡು ತಪ್ಪಿಸಿಕೊಳ್ಳಲು ಪ್ರಯತ್ನಿಸಿದಾಗ ನಾನು ಮತ್ತು ಚಾಸಾ-11 ರವರು ಒಂದು ಬೈಕನ್ನು ತೆಡೆದು ನಿಲ್ಲಿಸಿದ್ದು, ಚಾಸಾ-10 ಮತ್ತು ಚಾಸಾ-12 ರವರು ಮತ್ತೊಂದು ಬೈಕನ್ನು ತೆಡೆದು ನಿಲ್ಲಿಸಿರುತ್ತಾರೆ. ನಾವು ತಡೆಹಿಡಿದಿದ್ದ ಬೈಕ್ ಸಂಖ್ಯೆ ಕೆಎ 02 ಕ್ಯೂ 3172 ರಲ್ಲಿ ಒಬ್ಬ ವ್ಯಕ್ತಿ ಇದ್ದು ಅವರ ಹೆಸರನ್ನು ವಿಚಾರಿಸಲಾಗಿ ಹೆಸರು ಪ್ರತೀಪ್ ಬಿನ್ ಮರಿಕಾಳಯ್ಯ , ತುಳಸಿಗ್ರಾಮ, ಕೆ ಅರ್ ಪೇಟೆ ತಾಲ್ಲೂಕು ಎಂದು ತಿಳಿಸಿರುತ್ತಾರೆ. ಚಾಸಾ-10 ಮತ್ತು ಚಾಸಾ-12 ರವರು ತಡೆಹಿಡಿದಿದ್ದ ಬೈಕಿನಲ್ಲಿ ಇಬ್ಬರು ಆಸಾಮಿಗಳು ಬೈಕ್ ಸಂಖ್ಯೆ ಕೆಎ

09 ಇವಿ 2032 ಆಗಿದ್ದು ಚಾಲಕನ ಹೆಸರು ಸಿದ್ದರಾಜು ಬಿನ್ ದೊಡ್ಡಯ್ಯ, ಕೂಟಗಳ್ಳಿ ಮೈಸೂರು, ಹಿಂಬದಿ ಸವಾರನ ಹೆಸರು ಪ್ರಭ ಬಿನ್ ಕಾಳಯ್ಯ, ಸಿರಮನಹಳ್ಳಿ ಹೆಚ್ ಡಿ ಕೋಟೆ ತಾಲ್ಲೂಕು ಎಂದು ತಿಳಿಸಿರುತ್ತಾರೆ. ಸದರಿ ಬೈಕ್‌ನ ಹಿಂಬಂದಿಯಲ್ಲಿದ್ದ ಪ್ಲಾಸ್ಟಿಕ್ ಚೀಲದಲ್ಲಿ ಒಂದು ಕಬ್ಬಿಣದ ಹಾರೆ ತುಂಡು ಇದ್ದು, ಅದರ ಬಗ್ಗೆ ಮತ್ತು ಬೈಕಿನ ಬಗ್ಗೆ ವಿಚಾರ ಮಾಡಲಾಗಿ ಯಾವುದೇ ದಾಖಲೆಗಳನ್ನು ನೀಡದ ಕಾರಣ ಸದರಿಯವರು ಕಳ್ಳತನ ಮಾಡಲು ಬಂದಿರಬಹುದು ಎಂಬ ಅನುಮಾನ ಬಂದು 3 ಜನ ಆಸಾಮಿಗಳನ್ನು ಬೈಕ್ ಗಳ ಸಮೇತ ಚನ್ನರಾಯಪಟ್ಟಣ ನಗರ ಠಾಣೆಗೆ ದಿಃ 24.11.2014 ರ ಬೆಳಗಿನ ಜಾವ 12.30 ಕ್ಕೆ ಚಾಸಾ-13 ರವರ ಮುಂದೆ ಚಾಸಾ-12 ರವರು ಹಾಜರುಪಡಿಸಿ ವರದಿ ನೀಡಿರುತ್ತಾರೆ. ಸದರಿ ಬೈಕುಗಳನ್ನು ನೋಡಿದರೆ ಗುರುತಿಸುತ್ತೇನೆ.

ಚಾಸಾ-13 ರವರ ಆರೋಪಿತರನ್ನು ವಿಚಾರ ಮಾಡಿದಾಗ ಕೆಎ 02 ಕ್ಯೂ 3172 ರ ಬೈಕನ್ನು ಕುಶಾಲನಗರದ ಒಂದು ಮನೆಯ ಮುಂದೆ ನಿಲ್ಲಿಸಿದ್ದನ್ನು ಹಾಗೂ ಮತ್ತೊಂದು ಬೈಕನ್ನು ಹೊಳೆನರಸೀಪುರ ಮಾವಿನಕೆರೆ ಬೆಟ್ಟದಲ್ಲಿ ಕಳವು ಮಾಡಿರುವುದಾಗ 1ನೇ ಆರೋಪಿ ಒಪ್ಪಿದ್ದು, ಆರೋಪಿತರು ಕಾರೆಹಳ್ಳಿ ಯ ಒಂದು ಮನೆಯಲ್ಲಿ ಕಳ್ಳತನ ಮಾಡಿರುವುದಾಗಿ ನಂತರ ದುದ್ದಾ ಹೋಬಳಿ ಅಟ್ಟಾವರ ಗೇಟ್ ನಲ್ಲಿ ಒಂದು ಮನೆಗೆ ನುಗ್ಗಿ ಚಿನ್ನಾಭರಣ ಮತ್ತು ಮೊಬೈಲ್‌ಗಳನ್ನು, ಒಂದು ಬಂದೂಕನ್ನು ಸುಲಿಗೆ ಮಾಡಿರುವುದಾಗಿ ಹಾಗೂ ಚನ್ನರಾಯಪಟ್ಟಣದ ಹಳೇ ಬಸ್ ಸ್ಟ್ಯಾಂಡ್ ನಲ್ಲಿರುವ ಚಿನ್ನಬೆಳ್ಳಿ ಅಂಗಡಿಯಲ್ಲಿ ಗೋಡೆ ಕೊರೆದು ಬೆಳ್ಳಿ ಆಭರಣವನ್ನು ಕಳುವು ಮಾಡಿರುವುದಾಗಿ ಒಪ್ಪಿಕೊಂಡಿರುತ್ತಾರೆ.

ನಂತರ 2ನೇ ಆರೋಪಿಯ ಮನೆಯಲ್ಲಿ ಬೆಳ್ಳಿಯ ಆಭರಣಗಳು, ಬಂದೂಕು ಮತ್ತು 2 ಮೊಬೈಲುಗಳು ಹಾಗೂ ಚನ್ನರಾಯಪಟ್ಟಣದ ಆದಿತ್ಯ ಜ್ಯೂಯಲರ್ ್ಸ್ ನಲ್ಲಿ ಬೆಳ್ಳಿ ಆಭರಣಗಳು, ಅಟ್ಟಾವರದಲ್ಲಿ ಕಳ್ಳತನ ಮಾಡಿದ್ದ ಚಿನ್ನದ ಒಡವೆಗಳನ್ನು

ವಶಪಡಿಸಿಕೊಂಡಿರುತ್ತಾರೆ. ಆರೋಪಿತರವನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದಲ್ಲಿ 2ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಗಸ್ತಿನಲ್ಲಿದ್ದಾಗ ವಶಕ್ಕೆ ಪಡೆದಿದ್ದ ವಾಹನಗಳನ್ನು ಗುರುತಿಸುವ ಸಂಬಂಧ ಸರ್ಕಾರಿ ಅಭಿಯೋಜಕರು ಗುರುತಿಸುವ ಸಂಬಂಧ ಪಾಟಿ ಸವಾಲಿಗೆ ಕಾಲಾವಕಾಶ ಕೋರಿದ್ದು, ನೀಡಲಾಯಿತು.**

(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ**).

**ಓ ಹೇ ಕೇ ಸರಿ ಇದೆ.**

(**ಕುಸುಮ ವಿ.**)
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ.**